65

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ: 19/10/2016

ಪ್ರಕರಣ ಸಂಖ್ಯೆ: ಆರ್‌ಎ 53/2014-15

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀನಿವಾಸ<br>ಬಿನ್ ಲೇಟ್ ಲಕ್ಷ್ಮೀಪತಯ್ಯ<br>2. ಸೀನಪ್ಪ<br>-ಇಬ್ಬರೂ ವಾಸ<br>ಬೆಡಿಶೆಟ್ಟಿಹಳ್ಳಿ ಗ್ರಾಮ<br>ಮಾಸ್ತಿ ಹೋಬಳಿ<br>ಮಾಲೂರು ತಾಲ್ಲೂಕು<br>(ಶ್ರೀ ಜಿ.ಸಿ.ಹನುಮಂತ<br>-ವಕೀಲರು ರವರಿಂದ) | | 1. ಲಕ್ಷ್ಮಮ್ಮ<br>ಬಿನ್ ಮುನಿಯಪ್ಪ<br>ಕೋಂ ಪಿಳ್ಳಪ್ಪ<br>ಲಕ್ಕೇನಹಳ್ಳಿ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>2. ಉಪತಹಶೀಲ್ದಾರ್<br>ನಾಡಕಛೇರಿ, ಮಾಸ್ತಿ ಹೋಬಳಿ<br>ಮಾಲೂರು ತಾಲ್ಲೂಕು.<br>(ಶ್ರೀ ಎಂ.ಶ್ರೀನಿವಾಸ್<br>-ವಕೀಲರು ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ:ಆರ್‌ಎ.90/2013-14 ದಿನಾಂಕ:30/09/2014. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

*****

## ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136 ಓದಲಾದ ಕಲಂ 50 ರಂತೆ ಸಲ್ಲಿಸಿರುತ್ತಾರೆ.

## ಪ್ರಕರಣದ ಸಂಕ್ಷಿಪ್ತ ವಿವರ,

ಮಾಲೂರು ತಾಲ್ಲೂಕು, ಮಾಸ್ತಿ ಹೋಬಳಿ, ಬೆಡಿಶೆಟ್ಟಿಹಳ್ಳಿ ಗ್ರಾಮದ ಸ.ನಂ.46 ರಲ್ಲಿ 1-07½ ಎಕರೆ ಜಮೀನಿಗೆ ಸಂಬಂದಿಸಿದಂತೆ ತಹಶೀಲ್ದಾರರ ಹುಕ್ಕುಂ ಕ್ರಮಾಂಕ:ಆರ್‌ಆರ್‌ಟಿ(ಡಿ)23/11-12 ದಿನಾಂಕ:15/03/2013 ರ ಆದೇಶವನ್ನು ರದ್ದುಪಡಿಸಬೇಕೆಂದು ಕೋರಿ ಲಕ್ಷ್ಮಮ್ಮ ಕೋಂ ಪಿಳ್ಳಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ:ಆರ್‌ಎ.90/2013-14 ದಿನಾಂಕ: 30/09/2014. ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಪ್ರಶ್ನಿತ ತಹಶೀಲ್ದಾರರ ಆದೇಶವನ್ನು ರದ್ದುಪಡಿಸಿ ಆದೇಶಿಸಿರುತ್ತಾರೆ. ಹಾಗೂ ಮೃತ ಖಾತೆದಾರರ ಎಲ್ಲಾ ಹಿತಾಸಕ್ತಿಯುಳ್ಳ ವಾರಸುದಾರರಿಗೆ ತಿಳುವಳಿಕೆ ಪತ್ರ ನೀಡಿ, ವಿಚಾರಣೆ ನಡೆಸಿ ಖಾತೆ ಮಾಡಲು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಗೆ ನಿರ್ದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಲಾಯ್ತು.

...2

## ಆದೇಶ

ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿದೆ. ಕೆಳ ನ್ಯಾಯಾಲಯದ ಪ್ರಶ್ನಿತ ಆದೇಶವನ್ನು ರದ್ದುಪಡಿಸಿದೆ. ಎದುರುದಾರರು ತಮಗೆ ಇರಬಹುದಾದ ಹಕ್ಕಿನ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಸೂಕ್ತ ಪರಿಹಾರ ಪಡೆದ ನಂತರ ಅದರಂತೆ ಖಾತೆ ಕೋರಲು ಸ್ವತಂತ್ರರು.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ: **19/10/2016** ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K. V. Thrilokachandra

ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ.

ನಕಲು ನಿಜವಿದೆ

ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
28/10/16

ದಿನಾಂಕ:10/12/2014 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಮೇಲ್ಮನವಿದಾರರ ವಕೀಲರು ಹಾಜರು ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ:22/06/2016 ರಂದು ಉಭಯತ್ರರು ಹಾಜರು, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರ ಮೇಲ್ಮನವಿ ಅರ್ಜಿ ಮತ್ತು ಲಿಖಿತವಾದದಲ್ಲಿ ಮಾಲೂರು ತಾಲ್ಲೂಕು, ಮಾಸ್ತಿ ಹೋಬಳಿ, ಬೆಡಿಶೆಟ್ಟಿಹಳ್ಳಿ ಗ್ರಾಮದ ಸ.ನಂ.46 ರಲ್ಲಿ 2-37 ಎಕರೆ ಜಮೀನು ಮೂಲತಃ ಶಾನುಭೋಗ ಇನಾಂತಿ ಜಮೀನಾಗಿದ್ದು, ಸಾಕಮ್ಮ ರವರಿಗೆ ಸಂಖ್ಯೆ:ಐ.ಎನ್.ಎ/ಸಿಆರ್/01/84-85 ರಂತೆ ಮಂಜೂರಾಗಿರುತ್ತದೆ. ಸಾಕಮ್ಮ ರವರ ಗಂಡ ಚಿಕ್ಕಣ್ಣ ಹಾಗೂ ಶಿವಣ್ಣಪ್ಪ ರವರು ಅಣ್ಣ ತಂಮ್ಮಂದಿರಾಗಿದ್ದು, ವಿವಾದಿತ ಜಮೀನಿನಲ್ಲಿ ಸಾಕಮ್ಮ ಹಾಗೂ ಶಿವಣ್ಣಪ್ಪ ನವರ ಮಗ ಚಿಕ್ಕಮುನಿಯಪ್ಪ ರವರು ತಲಾ ಅರ್ಧ ಹಿಸ್ಸೆಯಂತೆ ಎಂ.ಆರ್6/86-87 ರಂತೆ ಖಾತೆ ಮಾಡಿಕೊಂಡಿರುತ್ತಾರೆ. ಸಾಕಮ್ಮನವರು ತಮ್ಮ ಅರ್ಧ ಹಿಸ್ಸೆಯನ್ನು ರತ್ನಮ್ಮ(1ನೇ ಮೇಲ್ಮನವಿದಾರರ ತಾಯಿ) ರವರಿಗೆ ದಿನಾಂಕ:10/01/1997 ರಂದು ನೋಂದಾಯಿತ ವಿಲ್ ಯಾ ಇಚ್ಛಾಪತ್ರ ಬರೆದುಕೊಟ್ಟಿರುತ್ತಾರೆ. ಚಿಕ್ಕಮುನಿಯಪ್ಪ ರವರ ಅರ್ಧ ಹಿಸ್ಸೆಯನ್ನು ಇವರ ಸಾಕು ಮಗಳಾದ ಭಾಗ್ಯಮ್ಮ (2ನೇ ಮೇಲ್ಮನವಿದಾರರ ಹೆಂಡತಿ) ರವರ ಭಾಗಕ್ಕೆ ಬಂದಿರುತ್ತದೆ. ಮೊದಲನೆ ಎದುರುದಾರರು ಚಿಕ್ಕಮುನಿಯಪ್ಪ ರವರ ಮಗಳಾಗಿರುವುದಿಲ್ಲ. ಇವರ ತಾಯಿ ಚಿಕ್ಕಮುನಿಯಮ್ಮ ಉಃ ಬೋಡೆಮ್ಮ ರವರು ಕಾಡಮಾಗುಂದಿ ಗ್ರಾಮದ ಈರಪ್ಪ ರವರನ್ನು ನೋಂದಾಯಿತ ವಿವಾಹವಾಗಿರುತ್ತಾರೆ. ರತ್ನಮ್ಮ ಹಾಗೂ ಚಿಕ್ಕಮುನಿಯಮ್ಮ ಉಃ ಬೋಡೆಮ್ಮ ರವರುಗಳು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ನಂ.ಓ.ಎಸ್.424/2007 ರಂತೆ ರಾಜಿ ಮಾಡಿಕೊಂಡಿರುತ್ತಾರೆ. ರಾಜಿಯಂತೆ ವಿವಾದಿತ ಜಮೀನಿನ ಪೈಕಿ 1-39½ ಎಕರೆ ರತ್ನಮ್ಮ ರವರಿಗೆ ಉಳಿದ 0-27½ ಗುಂಟೆ ಚಿಕ್ಕಮುನಿಯಮ್ಮ ಉಃ ಬೋಡೆಮ್ಮ ರವರಿಗೆ ಸೇರಿರುವುದಾಗಿ ತಿಳಿಸಿರುತ್ತಾರೆ. ಸದರಿ ರಾಜಿಯಂತೆ ತಹಶೀಲ್ದಾರ್, ಮಾಲೂರು ತಾಲ್ಲೂಕು ರವರು ತಮ್ಮ ಆದೇಶ ಸಂಖ್ಯೆ: ಆರ್.ಆರ್.ಟಿ(ಡಿಸ್)23/2011-12. ರಂತೆ ಖಾತೆಮಾಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸದೆ ಸಹಾಯಕ ಕಮೀಷನರ್ ರವರು ಮಾಡಿರುವ ಪ್ರಶ್ನಿತ ಆದೇಶವನ್ನು ರದ್ದುಪಡಿಸಿ ತಮ್ಮ ಮೇಲ್ಮನವಿಯನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ.

ಎದುರುದಾರರಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ತಮ್ಮ ವಾದವನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಸಹಾಯಕ ಕಮೀಷನರ್ ರವರಲ್ಲಿ ನೀಡಿದ ಲಿಖಿತ ವಾದವನ್ನು ಪರಿಗಣಿಸಲಾಗಿದೆ.

ಉಭಯತ್ರರ ವಾದ, ಕಡತದಲ್ಲಿ ಲಭ್ಯವಿರುವ ದಾಖಲೆಗಳು ಹಾಗೂ ಕೆಳನ್ಯಾಯಾಲಯದ ಆದೇಶವನ್ನು ಪರಿಶೀಲಿಸಲಾಗಿ ಮಾಲೂರು ತಾಲ್ಲೂಕು, ಮಾಸ್ತಿ ಹೋಬಳಿ, ಬೆಡಿಶೆಟ್ಟಿಹಳ್ಳಿ ಗ್ರಾಮದ ಸ.ನಂ.46 ರಲ್ಲಿ 2-27 ಎಕರೆ ಜಮೀನು ಶಾನುಭೋಗ ಇನಾಂತಿ ಜಮೀನಾಗಿದ್ದು, ಸಂಖ್ಯೆ: ಐ.ಎನ್.ಎ/ಸಿಆರ್/01/84-85 ರಂತೆ ಸಾಕಮ್ಮ ಕೋಂ ಚಿಕ್ಕಣ್ಣ ರವರಿಗೆ ಮಂಜೂರಿ ಆಗಿರುತ್ತದೆ. ನಂತರ ಎಂ.ಆರ್.6/86-87 ರಂತೆ ಸಾಕಮ್ಮ ಹಾಗೂ ಮುನೆಪ್ಪ ಬಿನ್ ಶಿವಣ್ಣಪ್ಪ ರವರು ತಲಾ ಅರ್ಧ ಹಿಸ್ಸೆಯಂತೆ ಖಾತೆ ಮಾಡಿಕೊಂಡಿರುತ್ತಾರೆ. ಸಂಖ್ಯೆ:129/96-97 ದಿನಾಂಕ:10/01/1997 ರಂದು ಸಾಕಮ್ಮ ರವರು ಅವರ ಅರ್ಧ ಹಿಸ್ಸೆ ಜಮೀನನ್ನು ಮುನಿಯಪ್ಪ ಮತ್ತು ಈತನ ಹೆಂಡತಿ ರತ್ನಮ್ಮ ರವರಿಗೆ ನೋಂದಾಯಿತ ವಿಲ್ ಯಾ ಇಚ್ಛಾಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ರತ್ನಮ್ಮ ಕೋಂ ಮುನಿಯಪ್ಪ ಹಾಗೂ ಬೋಡೆಮ್ಮ ಉಃ ಚಿಕ್ಕಮುನಿಯಮ್ಮ ಕೋಂ ಮುನೆಪ್ಪ ರವರು ಮಾನ್ಯ ಸಿವಿಲ್ ನ್ಯಾಯಾಲಯ (ಕಿ.ಶ್ರೇ) ಮಾಲೂರು ರವರಲ್ಲಿ ವಿವಾದಿತ ಸ.ನಂ.46 ರಲ್ಲಿ 2-27 ಎಕರೆ ಜಮೀನಿನ ಪೈಕಿ 1-39½ ಎಕರೆ ಜಮೀನು ರತ್ನಮ್ಮ ಕೋಂ ಮುನಿಯಪ್ಪ ರವರಿಗೆ ಹಾಗೂ ಉಳಿದ 0-27½ ಗುಂಟೆ ಜಮೀನು ಬೋಡೆಮ್ಮ ಉಃ ಚಿಕ್ಕಮುನಿಯಮ್ಮ ರವರಿಗೆ ಸೇರಿರುವುದಾಗಿ ರಾಜಿ ಮಾಡಿಕೊಂಡಿರುತ್ತಾರೆ. ಇದರಂತೆ ತಹಶೀಲ್ದಾರ್, ಮಾಲೂರು ತಾಲ್ಲೂಕು ರವರ ಪ್ರಕರಣ ಸಂಖ್ಯೆ:ಆರ್ಆರ್ಟಿ(ಡಿಸ್)23/2011-12 ದಿನಾಂಕ: 15/03/2013 ರಂತೆ ಖಾತೆ ಮಾಡಲು ಆದೇಶಿಸಿರುವುದು ಕಾನೂನು ಬದ್ಧವಾಗಿದ್ದು, ಸಹಾಯಕ ಕಮೀಷನರ್ ರವರು ಮಾಡಿರುವ ಪ್ರಶ್ನಿತ ಆದೇಶ ನ್ಯೂನ್ಯತೆಯಿಂದ ಕೂಡಿರುತ್ತದೆ.

...3